◆ **ಇತ್ತಿತ್ತಲಾಗಿ ಎಡ–ಬಲಗಳ ಚರ್ಚೆ ಬಿರುಸಾಗಿ ನಡೆಯುತ್ತಿದೆ. ಮನುಷ್ಯತ್ವಕ್ಕೆ ಸಿದ್ಧಾಂತಗಳ ಆಧಾರ ಬೇಕೆ?**

ಮನುಷ್ಯತ್ವಕ್ಕೆ ಸಿದ್ಧಾಂತಗಳ ಆಧಾರ ಅನಗತ್ಯ. ಎಡ, ಬಲ, ಮಧ್ಯಮಗಳೆಲ್ಲ ತಾವೇ ಘೋಷಿಸಿಕೊಂಡ, ತಾವೇ ಪೋಷಿಸಿಕೊಂಡು ಬಂದ ಸಿದ್ಧಾಂತಗಳು. ಜೀವ ಪರ, ಮನುಷ್ಯ ಪರ ಸಿದ್ಧಾಂತವೇ ನಿಜವಾದ ಸಿದ್ಧಾಂತ. ವೈದಿಕ ಪರಂಪರೆಯನ್ನು ಧಿಕ್ಕರಿಸಿ ಜೈನಧರ್ಮದಲ್ಲಿದ್ದಾಗಲೂ ಅವೆಲ್ಲವನ್ನೂ ಮೀರಿ 'ಮನುಷ್ಯ ಜಾತಿ ತಾನೊಂದೇ ವಲಂ' ಎಂದ ಪಂಪನ ಸಿದ್ಧಾಂತ ಯಾವುದು? ಕವಿ ರಾಘವಾಂಕ ತನ್ನ ಹರಿಶ್ಚಂದ್ರಕಾವ್ಯದಲ್ಲಿ ಬೇಟೆಯಾಡಿ ದಣಿವಾರಿಸಿಕೊಳ್ಳುತ್ತಿದ್ದ ಹರಿಶ್ಚಂದ್ರ ನರ್ತಕಿಯರ ನರ್ತನ ನೋಡಿ, ಬೇಡಿದ್ದನ್ನು ಕೊಡಲು ಮುಂದಾಗುತ್ತಾನೆ. ಆದರೆ ನರ್ತಕಿಯರು ಮದುವೆಯಾಗಲು ಒತ್ತಾಯಿಸಿದಾಗ, ಹರಿಶ್ಚಂದ್ರ ತಿರಸ್ಕರಿಸುತ್ತಾನೆ. ಆಗ ನರ್ತಕಿಯರು ಪಂಚೇಂದ್ರಿಯಗಳಲ್ಲಿ ನಾಲ್ಕನ್ನು ಭೋಗಿಸಿ ಒಂದನ್ನು ಮಾತ್ರ ಅಧಿಕವೆಂಬಂತೆ ಭಾವಿಸುವುದು ಸರಿಯೇ ಎಂಬ ಮೂಲಭೂತ ಪ್ರಶ್ನೆಯನ್ನು ನರ್ತಕಿಯರ ಮೂಲಕ ರಾಘವಾಂಕ ಎತ್ತುತ್ತಾನೆ. ಮತ್ತು ಜನ ಬದುಕಬೇಕೆಂದು ತಾನು ಕಾವ್ಯ ಬರೆದುದ್ದಾಗಿ ಉಗ್ಗಡಿಸುತ್ತಾನೆ. ಇವರಿಬ್ಬರಿಗೂ ಧರ್ಮ ಸಿದ್ಧಾಂತಕ್ಕಿಂತ ಮಾನವೀಯ ಸಿದ್ಧಾಂತವೇ ಮುಖ್ಯವಾಗಿತ್ತು. ವಚನಕಾರರಂತೂ ಸಾರ್ವಕಾಲಿಕ ಮಾನವೀಯ ಸಿದ್ಧಾಂತವನ್ನೇ ಎತ್ತಿಹಿಡಿದವರು. ಸಮಕಾಲೀನ ಸಂದರ್ಭದಲ್ಲಿ ಮನಸ್ಸುಗಳೇ ಮಲೀನಗೊಂಡಾಗ ಸಿದ್ಧಾಂತದ ಬಗ್ಗೆ ಮಾತನಾಡುವುದು ಅದೆಷ್ಟು ಸರಿ? ಮಲೀನಗೊಂಡ ನಮ್ಮ ಮನಸ್ಸುಗಳು ಮೊದಲು ಸ್ವಚ್ಛವಾಗಬೇಕು. ಆಗ ಬಾಪುವಿನ ಸ್ವಚ್ಛ ಭಾರತದ ಕಲ್ಪನೆ, ತನ್ನಿಂದ ತಾನೇ ಸಾಕಾರಗೊಳ್ಳುತ್ತದೆ. ಸಾರ್ಥಕವೂ ಆಗುತ್ತದೆ. ಅದಕ್ಕೆ ಇನ್ನೊಂದು ಹೊಸ ಆಯಾಮ ಸಿಗುತ್ತದೆ. ಅಂತರಂಗವೇ ಕೊಳಕಾದಾಗ ಸಿದ್ಧಾಂತಗಳ ಬಗ್ಗೆ ಮಾಡನಾಡುವುದು ಎಷ್ಟು ಸರಿ?

◆ **ವಿಮರ್ಶೆಗೆ ಪ್ರತಿ ವಿಮರ್ಶೆ ಬೇಕು ಎಂದು ಹೇಳಿದ್ದೀರಿ. ಯಾವುದೇ ವಿಮರ್ಶೆ ಅಂತಿಮ ಸತ್ಯ ಅಲ್ಲ ಎಂಬುದು ನಿಮ್ಮ ಭಾವನೆಯೇ?**

ಯಾವುದೂ ಅಂತಿಮವಲ್ಲ, ಅಂತಿಮವಾಗಬಾರದು. ಹೊಸದನ್ನು ಸ್ವೀಕರಿಸುವುದು ಒಪ್ಪುವುದು ಪ್ರಕೃತಿ ನಿಯಮ. ಕಾವ್ಯ ಹೀಗೇ ಇರಬೇಕು, ಹೀಗೇ ಬರೆಯಬೇಕು ಎನ್ನುವುದಕ್ಕೆ ನನ್ನ ವಿರೋಧವಿದೆ. ತಮ್ಮ ಮೂಗಿನ ನೇರಕ್ಕೆ ಬರೆಯುಬೇಕು ಎನ್ನುವ ಹಲ, ಕೆಲ ವಿಮರ್ಶಕರ ವಿಮರ್ಶೆಯ ಮಾನದಂಡಗಳೇನು? ಕಾವ್ಯಕ್ಕೆ ಪ್ರತಿ ಕಾವ್ಯ ಹುಟ್ಟಿದಂತೆ, ವಿಮರ್ಶೆಗೆ ಪ್ರತಿ ವಿಮರ್ಶೆ ಹುಟ್ಟಬಾರದೇಕೆ? ಪ್ರತಿ ವಿಮರ್ಶೆ ಅಲ್ಲಲ್ಲಿ ಬಂದರೂ ವ್ಯಕ್ತಿ ಹಾಗೂ ಜಾತಿಗೆ ಸೀಮಿತವಾಗಿವೆ. ಸಮಕಾಲೀನ ಸಂದರ್ಭದಲ್ಲಿ ಕೆಲ ಸಾಹಿತಿಗಳು ಜಾತಿ ಮೀರಿಲ್ಲ. ಧರ್ಮ ಮೀರಿಲ್ಲ. ಜಾತಿ ಮತ್ತು ಧರ್ಮದ ಜೊತೆ ಗುಪ್ತ ಸಂಧಾನ ಮಾಡಿಕೊಂಡಿದ್ದಾರೇನೋ ಎಂಬ ಅನುಮಾನ ನನ್ನನ್ನು ಕಾಡುತ್ತಲೇ ಇದೆ. ಹೀಗಾಗಿ ಆಂಡಯ್ಯನಿಂದ ಹಿಡಿದು ಕುವೆಂಪುವರೆಗೂ, ಈಗ ನನ್ನವರೆಗೂ ವಿಮರ್ಶಕರಿಂದ ಅನ್ಯಾಯವಾಗುತ್ತಲೇ ಇದೆ. ಜಾತಿ ಕಾರಣಕ್ಕೆ, ಕುಲ ಮೂಲ ಕಾರಣಕ್ಕೆ ಅಧಿಕಾರ, ಅಂತಸ್ತಿನ ಕಾರಣಕ್ಕೆ, ಸ್ಥಾನ ಮಾನಗಳ ಕಾರಣಕ್ಕೆ, ಇವೆಲ್ಲ ನಿರಂತರವಾಗಿ ನಡೆದೇ ಇವೆ. ನಾನಂತೂ ಎಂದೂ ಯಾವತ್ತೂ ಇದರ ಕುರಿತು ತಲೆ ಕೆಡಿಸಿಕೊಂಡಿಲ್ಲ. ಕವಿ ಸ್ವತಂತ್ರ. ಯಾರ ಹಂಗಿಗೂ ಮುಲಾಜಿಗೂ ಒಳಗಾಗಲಾರ. ಒಳಗಾಗಬಾರದು. ರಾಜಕಾರಣದಂತೆ ಸಾಹಿತ್ಯದಲ್ಲೂ ಅನೇಕ ರೀತಿಯ ಒಳ ಒಪ್ಪಂದ, ಹೊರ ಒಪ್ಪಂದಗಳಿವೆ. ಇಂತಹ ಪರಂಪರೆಯನ್ನು ಕವಿಯೇ ಧಿಕ್ಕರಿಸಿ ಸಹೃದಯನತ್ತ, ಓದುಗನತ್ತ, ತನ್ನನ್ನು ತನ್ನ ಕಾವ್ಯದ ಇರುವಿಕೆಯನ್ನು, ತಾನೇ ದೃಢೀಕರಣಗೊಳಿಸಿಕೊಳ್ಳುವುದೇ ಉತ್ತಮ ಮಾರ್ಗ.